**ಇಂದು ದಿನಾಂಕ 25.09.2025 ರಂದು ಪಿಡಬ್ಲ್ಯೂ -2 ರವರನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿಯರ ಪರ ವಕೀಲರಿಂದಃ**

**1.** 1 ನೇ ಪ್ರತಿವಾದಿ ನನ್ನ ಸೋದರ ಅತ್ತೆ. ನಾನು ಮತ್ತು 1 ನೇ ಪ್ರತಿವಾದಿ ಅನ್ಯೂನ್ಯವಾಗಿದ್ದೇವೆ. ದಾವಾ ಆಸ್ತಿ ನನ್ನ ತಾತ ನನ್ನ ಅತ್ತೆಗೆ ವಿಲ್ ಮಾಡಿದ ಮೂಲಕ ಬಂದಿದೆ. ಆನಂತರ ಸರ್ವೆ ನಂಬರ್‌ಗಳನ್ನು ಅದಲು-ಬದಲು ಮಾಡಿಕೊಂಡಿದ್ದಾರೆ. ನವೀನ್ ಕುಮಾರ್ ಮತ್ತು ನಾನು ಒಂದೇ ಶಾಲೆಯಲ್ಲಿ ಓದಿ ಬೆಳೆದಿದ್ದೇವೆ ಎಂದರೆ ನಿಜ. ನನ್ನ ಅತ್ತೆಯ ಮನೆಯಲ್ಲಿ ಯಾರು ಯಾರು ಇದ್ದಾರೆ ಎಂದು ನನಗೆ ಸಂಪೂರ್ಣ ಮಾಹಿತಿ ಇದೆ. 2016 ರಲ್ಲಿ 2 ನೇ ಪ್ರತಿವಾದಿಗೆ ಆರೋಗ್ಯ ಸರಿ ಇರಲಿಲ್ಲ ಎಂದರೆ ನಿಜ. ಆದ ಕಾರಣ 1 ನೇ ಪ್ರತಿವಾದಿ ಯಾರಿಂದಲಾದರು ರೂ.3 ಲಕ್ಷ ಹಣವನ್ನು ಕೊಡಿಸು ಎಂದು ನನ್ನ ಹತ್ತಿರ ಕೇಳಿದರು ಎಂದರೆ ಸರಿಯಲ್ಲ. ನಾನು ಆ ವಿಷಯವನ್ನು ನವೀನ್ ಕುಮಾರ್ ಗಮನಕ್ಕೆ ತಂದು ಅವರ ತಂದೆ-ತಾಯಿಯ ಹತ್ತಿರ ಆ ಹಣವನ್ನು ಕೊಡಿಸಿದೆನು ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ ಮಾರಾಟ ಮಾಡಲು ಒಪ್ಪಿಲ್ಲದಿದ್ದರು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ರೂ.3 ಲಕ್ಷ ಹಣವನ್ನು ಪಡೆದು ಭದ್ರತೆಗೋಸ್ಕರ ಪ್ರತಿವಾದಿಯರಿಂದ ಖಾಲಿ ಛಾಪಾ ಕಾಗದದ ಮೇಲೆ ನಾವು ಸಹಿ ಮಾಡಿಸಿಕೊಂಡೆವು ಎಂದರೆ ಸರಿಯಲ್ಲ. ಕ್ರಯದ ವ್ಯವಹಾರ ಆಗುವಾಗ ನಾನು ಇದ್ದೆನು. ದಿನಾಂಕಃ26.11.2016 ರಂದು ಆ ವ್ಯವಹಾರ ನಡೆಯಿತು. ಆ ಕ್ರಯದ ಕರಾರು ಪತ್ರವನ್ನು ಜಯಮ್ಮ ಮತ್ತು ಅಕ್ಕಯ್ಯಮ್ಮ ತಂದರು. ರೂ.100 ರ ಛಾಪಾ ಕಾಗದವನ್ನು ತಂದರು. ಆ ಪತ್ರವನ್ನು ದೇವನಹಳ್ಳಿಯಲ್ಲಿ ಬರೆಸಿದರು. ಎಲ್ಲಿ ಎಂದು ನನಗೆ ಗೊತ್ತಿಲ್ಲ. ಯಾರು ತಯಾರು ಮಾಡಿದರು ಎಂದು ಗೊತ್ತಿಲ್ಲ. ಆ ದಾಖಲೆಯನ್ನು ನಾನು ಓದಿ ಸಹಿ ಮಾಡಿದ್ದೇನೆ. ಕರಾರು ಪತ್ರ ಆದ ದಿನ ರೂ.3 ಲಕ್ಷ ಹಣವನ್ನು ಕೊಟ್ಟಿದ್ದೇವೆ ಆನಂತರ ರೂ.1 1/4 ಲಕ್ಷ ಹಣವನ್ನು ಕೊಟ್ಟಿದ್ದೇವೆ. 2017 ರಲ್ಲಿ ರೂ.1 1/4 ಲಕ್ಷ ಕೊಟ್ಟ ಬಗ್ಗೆ ರಶೀದಿ ಇದೆ. ನಾವು ಹೇಳಿದಂತೆ ರೂ.1 1/4 ಲಕ್ಷವನ್ನು ಕೊಟ್ಟಿಲ್ಲದಿದ್ದರು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವೆ ಹಾಕುವಾಗ ವಾದಿಯ ಜೊತೆ ನಾನು ವಕೀಲರ ಕಛೇರಿಗೆ ಮಾಹಿತಿ ಕೊಡಲು ಹೋಗಿರಲಿಲ್ಲ. ನೋಟೀಸ್ ಬಂದ ನಂತರ ನಾನು ಕಛೇರಿಗೆ ಹೋಗಿದ್ದೆನು. ಕರಾರುಪತ್ರದಲ್ಲಿ 11-ಇ ಸ್ಕೆಚ್ ಆಗಬೇಕು ಎಂದು ಬರೆದಿದ್ದಾರೆ. ನಾನು ಹೇಳಿರುವಂತೆ ರೂ.1 1/4 ಲಕ್ಷ ಹಣದ ಬಗ್ಗೆ ನೋಟೀಸ್ ನಲ್ಲಿ ತಿಳಿಸಿಲ್ಲ ಎಂದರೆ ನಿಜ. ದಿನಾಂಕಃ15.02.2017 ರಲ್ಲಿ ರೂ.1 1/4 ಲಕ್ಷ ಹಣವನ್ನು ಕೊಟ್ಟಿದ್ದೇವೆ ಎಂದು ನಾವು ಸುಳ್ಳು ಹೇಳತ್ತಿದ್ದೇವೆ

ಎಂದರೆ ಸರಿಯಲ್ಲ. ಆ ರೀತಿ ಹಣ ಕೊಟ್ಟಿದ್ದರೆ ಕರಾರು ಪತ್ರದಲ್ಲಿ ಷರಾ ಬರೆಸುತ್ತಿದ್ದೆವು ಆದ ಕಾರಣ ಹಣ ಕೊಟ್ಟಿಲ್ಲ ಎಂದರೆ ಸರಿಯಲ್ಲ. ವಾದಿ ಮತ್ತು ಪ್ರತಿವಾದಿಯ ಮಧ್ಯೆ ಕೇವಲ ಹಣದ ವ್ಯವಹಾರ ನಡೆದಿದೆ ಕ್ರಯದ ವ್ಯವಹಾರ ನಡೆದಿಲ್ಲ ಎಂದರೆ ಸರಿಯಲ್ಲ. ಕರಾರು ಪತ್ರಗಳಲ್ಲಿ ತಿದ್ದುಪಡಿ ಆದರೆ ಸಹಿಗಳನ್ನು ಪಡೆದುಕೊಳ್ಳುತ್ತಾರೆ ಎಂದರೆ ನಿಜ. ಕರಾರು ಪತ್ರದಲ್ಲಿ ಎರಡು ಕಡೆ ತಿದ್ದುಪಡಿ ಆದರು ಸಹಿ ಹಾಕಿಸಿಲ್ಲ ಎಂದರೆ ಸರಿಯಲ್ಲ. 1 ವರ್ಷದಲ್ಲಿ ಕ್ರಯದ ವ್ಯವಹಾರ ಮುಗಿಯಬೇಕು ಎಂದು ಮಾತು-ಕತೆ ಮಾಡಲಾಗಿದೆ. ಆ ರೀತಿ ಒಕ್ಕಣೆ ಇಲ್ಲ ಎಂದರೆ ಸರಿಯಲ್ಲ. ನಿಪಿ-1 ರಲ್ಲಿ 6 ತಿಂಗಳು ವಾಯಿದೆ ಇದೆ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಗೆ ಸಹಾಯವಾಗಲು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).

**ಓ.ಹೇ.ಕೇ.ಸ.ಇ.ಎ. ಒಪ್ಪಿಕೊಂಡಿದ್ದಾರೆ,**

Sd/-
**ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ.,**
**ದೇವನಹಳ್ಳಿ.**